ಅವರ ಮಾತುಗಳಿಗಿಂತ ನಾವು ಬಹಳ ಮುಂದೆ ಬಂದಿದೀವಿ. ನಾನು ಪ್ರಸನ್ನ ಅವರಿಗೆ ಕೇಳಿದೆ: 'ನೀವು ಭವಭೂತಿಯ 'ಉತ್ತರ ರಾಮಚರಿತೆ'ಯಲ್ಲಿ ಹೇಳದೆ ಇರುವ, ಹೆಳವನಕಟ್ಟೆ ಗಿರಿಯಮ್ಮ ತನ್ನ ಕೃತಿಯಲ್ಲಿ ಹೇಳದೆ ಇರುವ, ಯಕ್ಷಗಾನದ ಲವಕುಶರ ಕಾಳಗದಲ್ಲಿ ಹೇಳದೆ ಇರುವ, ಯಾವ ಹೊಸಮಾತನ್ನು ರಾಮಾಯಣದ ಬಗ್ಗೆ ಹೇಳ್ತಿದೀರಿ? ಪೋಲಂಕಿ ರಾಮಮೂರ್ತಿ ಅವರು 30 ವರ್ಷಗಳ ಹಿಂದೇನೆ ಆಡಿದ ಮಾತುಗಳಿವು. ಭೈರಪ್ಪನವರು ಈಗ ಬರೆದಿರೋ 'ಉತ್ತರಕಾಂಡ'ದಲ್ಲೂ ಏನು ಹೊಸತಿದೆ? ಇವರು ರಾಮಾನುಜನ್ ಅವರ 'ತ್ರೀ ಹಂಡ್ರೆಡ್ ರಾಮಾಯಣಾಸ್' ಮೇಲೆ ಆದಂಥ ಆಕ್ರಮಣವನ್ನು ಪ್ರಸ್ತಾಪ ಕೂಡ ಮಾಡೋಕೆ ತಯಾರಿಲ್ಲ. ಹಿಂಸೆಯ ಬಗ್ಗೆ ಮಾತಾಡೋವಾಗೆಲ್ಲ ಅಮೂರ್ತವಾಗೇ ಮಾತಾಡ್ತಾರೆ.

◆ **ಹಿಂಸೆ ಮನುಷ್ಯನ ಮೂಲಭೂತ ಜೆನೆಸಿಸ್ ಒಳಗೇ ಅಂತರ್ಗತವಾಗಿದೆ ಅನ್ನೋ ಗ್ರಹಿಕೆ ಲಂಕೇಶರಲ್ಲಿ ಇತ್ತಾ?**

ಒಟ್ಟು ಜೆನಿಸಿಸ್‌ನಲ್ಲಿ ಹಿಂಸೆ ಅಡಗಿದೆ ಅನ್ನುವ ಮಾತು ತತ್‌ಕ್ಷಣದ ಹಿಂಸೆಯನ್ನು ಮರೆಮಾಚುತ್ತದೆ ಒಪ್ಕೋತೀನಿ. ಕಾರಂತರು ಅದನ್ನೇ ಹೇಳುತ್ತಾರೆ. ಅವರು ಚರಿತ್ರಪೂರ್ವ ಯುಗದಿಂದ ನಡೆದು ಬಂದ ಹಿಂಸೆ ಅಂತಲೂ ಹೇಳಿಬಿಡ್ತಾರೆ. ಎಷ್ಟು ಸುಲಭವಾಗಿ ಈ ಕ್ಷಣದ ಹಿಂಸೆಯನ್ನು ಮರೆತುಬಿಡಬಹುದು? ಆದರೆ ಲಂಕೇಶ್ ಹಾಗೆ ಮಾಡಿದ್ದು ನೆನಪಾಗೋದಿಲ್ಲ. ಈ ವಿಷಯದಲ್ಲಿ ನನಗೆ ಗೊತ್ತಿರುವ ಹಾಗೆ ಲಂಕೇಶ್ ಒಂದು ಅಪರೂಪದ ಉದಾಹರಣೆ. ರಾಮಜನ್ಮಭೂಮಿಯ ಚಳವಳಿಯ ಸಮಯದಲ್ಲಿ ಅದನ್ನು ನೇರವಾಗಿ ಪ್ರಸ್ತಾಪಿಸಿ ಕೋಮು ರಾಜಕೀಯವನ್ನು ಖಂಡಿಸಿ ಬರೆದರು. ಇದೇ ಸಮಯದಲ್ಲಿ ಅಡಿಗರೂ ಇದ್ದರು. ಹಾಸಿಗೆ ಹಿಡಿದಿದ್ದರು ಕೂಡ ಅವರ ಪ್ರಜ್ಞೆಯೆಲ್ಲ ಜಾಗೃತವಾಗಿತ್ತು. ಅವರು ಮಾತ್ರ ಆ ರಾಜಕೀಯದ ಜೊತೆಗೇನೆ ಇದ್ದರು. ನನಗೆ ನೆನಪಿದ್ದ ಹಾಗೆ ಆಗ ಅನಂತಮೂರ್ತಿ ಏನೂ ಮಾತಾಡಿದ ಹಾಗಿಲ್ಲ. ಬಾಬರಿ ಮಸೀದಿ ಉರುಳಿದ ಮಾರನೇ ದಿನ ಅನಂತಮೂರ್ತಿ ಉಡುಪಿಯಲ್ಲಿದ್ದರು. ಅವತ್ತು ಸಂಜೆ ಅವರದೊಂದು ಅಡಿಗರ ಮೇಲೆ ಭಾಷಣ ಇತ್ತು. ನಾನು ಬಹಳ ನಿರೀಕ್ಷೆಯಿಂದ ಕಾದಿದ್ದೆ, ಏನಾದ್ರು ಅಯೋಧ್ಯೆ ಬಗ್ಗೆ ಪ್ರಸ್ತಾಪಿಸ್ತಾರೆ ಅಂತ. ಪ್ರಸ್ತಾಪಿಸಲೇ ಇಲ್ಲ. ನನಗಿದು ನಿರಾಶೆ ಆಯ್ತು. ನಾ ಹೇಳಿದೆ ಅವರಿಗೆ: 'ನೀವು ಅದನ್ನು ಪ್ರಸ್ತಾಪ ಮಾಡ್ತೀರಿ ಅನ್ಕೊಂಡಿದ್ದೆ. ಮಾಡಲಿಲ್ಲ. ಆದರೆ ನಾನು ಭಾಷಣ ಮಾಡಿದ್ದರೆ ಖಂಡಿತ ಹೇಳ್ತಿದ್ದೆ.'

◆ **ಯಾಕೆ ಅವರು ಪ್ರಸ್ತಾಪ ಮಾಡಿರಲಿಕ್ಕಿಲ್ಲ?**

ಅದು ಅವರ ಡಿಪ್ಲೊಮಸಿ ಇರಬಹುದು. ನನಗೊತ್ತಿಲ್ಲ. ಅವರು ಕಾರಂತರ ಬಗ್ಗೆ ಮಾತಾಡಿದಾಗಲೂ 'ಇಲ್ಲ ಕಣಯ್ಯ, ಕಾರಂತರ ಜೀವನದಲ್ಲಿ ಅದು ಅಷ್ಟೇನು ಮುಖ್ಯವಲ್ಲ.' ಅಂದ್ರು. ನನಗೆ ಹಾಗನಿಸಿಲ್ಲ. ಯಾಕೆಂದರೆ ಕಾರಂತ ವಾಸ್ ವೆರಿಮಚ್ ಪಬ್ಲಿಕ್ ಇಂಟಲೆಕ್ಚುವಲ್ ಲೈಕ್ ಡಿವಿಜಿ, ಲೈಕ್ ಮಾಸ್ತಿ, ಅಂಡ್ ಮೋರ್‌ದ್ಯಾನ್ ಅನಂತಮೂರ್ತಿ. ಕಾರಂತರ ಪೊಲಿಟಿಕಲ್ ಸ್ಟ್ಯಾಂಡ್ ನನಗೆ ಅವರ ಕಾದಂಬರಿಗಳಷ್ಟೇ ಮುಖ್ಯ. ಆದರೆ ಅವರ ಪೊಲಿಟಿಕಲ್ ಸ್ಟ್ಯಾಂಡ್ ಹಿಡ್ಕೊಂಡು ಕಾದಂಬರಿಗಳನ್ನು ಜಡ್ಜ್ ಮಾಡೋದಿಲ್ಲ.

◆ **ಈ ಮಾತನ್ನ ಯಾವುದೇ ಲೇಖಕರ ಬಗ್ಗೆ ಕೂಡ ಹೇಳಬಹುದಾ?**

ಯಾವುದೇ ಲೇಖಕರ ಬಗ್ಗೆ ಹೇಳಬಹುದು. ಭೈರಪ್ಪನವರನ್ನ ಅವರ ಕೃತಿಗಳ ಒಳಗಿನಿಂದಲೇ ಜಡ್ಜ್ ಮಾಡಿ ಮಾತಾಡಬಲ್ಲೆ. 'ಆವರಣ'ವನ್ನು ಖಂಡನೆ ಮಾಡೋದಿಕ್ಕೆ ಅವರ ರಾಜಕೀಯವಲ್ಲ,